ಮೂಳೆ ತಜ್ಞರ ಅಭಿಮತದಂತೆ ಕೀಲು ಮತ್ತು ಎಲುಬಿನ(ಅಸ್ಥಿಗೆ) ಕ್ಷಯರೋಗ ಯಾವ ಕಾರಣಕ್ಕೂ ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ.

ಪ್ರಾರಂಭದ ಹಂತದಲ್ಲಿ ಪತ್ತೆಯಾಗದ ಕ್ಷಯದ ಕ್ರಿಮಿಗಳು ಉಲ್ಬಣಿಸಿ ದಾಗಲೇ ಮೂಳೆ ಬಯಾಪ್ಸಿಯಂತಹ ರೋಗ ಪತ್ತೆ ವಿಧಾನದಲ್ಲಿ ಕಾಣಿಸಿ ಕೊಳ್ಳುತ್ತವೆ. ಆಗ ಕ್ಷಯ ಬಾಧಿಸಿದ ಭಾಗ ನಾಶವಾಗುವುದು. ಆದರೆ ರೋಗ ಯಾವುದೆಂದು ಪತ್ತೆಯಾದ ಬಳಿಕ ವೈದ್ಯರು ನಿರ್ದೇಶಿಸಿದ ಔಷಧಿಯನ್ನು ಸರಿಯಾಗಿ ತೆಗೆದುಕೊಂಡರೆ ಮೂಳೆ ಕ್ಷಯ ಸಂಪೂರ್ಣವಾಗಿ ವಾಸಿಯಾಗುತ್ತದೆ. ಶ್ವಾಸಕೋಶದ ಕ್ಷಯ ರೋಗಿಗಳು ಕೆಮ್ಮಿದಾಗ, ಸೀನಿದಾಗ ಗಾಳಿಯಲ್ಲಿ ಹರಡುವ ಕ್ರಿಮಿಗಳು ಬಹುಬೇಗನೆ ಆರೋಗ್ಯವಂತನ ದೇಹ ಸೇರಿ ಕ್ಷಯ ರೋಗ ಹರಡುತ್ತದೆ. ಆದರೆ ಮೂಳೆ ಕ್ಷಯ ಹಾಗಲ್ಲ. ರೋಗಿಯ ಮೂಳೆಯಲ್ಲಿ ನೆಲೆಯಾದ ಕ್ಷಯದ ಕ್ರಿಮಿಗಳು ಒಬ್ಬರಿಂದ ಇನ್ನೊಬ್ಬರಿಗೆ ರೋಗವನ್ನು ಹರಡುವುದಿಲ್ಲ. ಮೂಳೆಯಲ್ಲಿ ಸೇರಿಕೊಂಡ ಕ್ರಿಮಿಗಳ ಚಟುವಟಿಕೆ ನಿಧಾನ. ಹಾಗಾಗಿ ಬೋನ್ ಟಿಬಿಗೊಳಗಾದ ರೋಗಿಗಳು ತಮ್ಮಿಂದ ಇನ್ನೊಬ್ಬರಿಗೆ ರೋಗ ಹರಡುತ್ತದೆ ಎಂಬ ಭಯಕ್ಕೊಳಪಡುವ ಅಗತ್ಯವಿಲ್ಲ. ರೋಗದ ತೀವ್ರತೆ ಅನುಸರಿಸಿ ವೈದ್ಯರು ನಿರ್ದೇಶಿಸಿದ ಔಷಧಿಗಳನ್ನು 6 ತಿಂಗಳು, 9 ತಿಂಗಳು, ಒಂದು ವರ್ಷ ಹೀಗೆ ವೈದ್ಯರು ಹೇಳಿದಷ್ಟು ಸಮಯ ಮರೆಯದೇ ತೆಗೆದು ಕೊಂಡರೆ ರೋಗ ಸಂಪೂರ್ಣ ವಾಸಿಯಾಗುತ್ತದೆ. ವೈದ್ಯರು ತಿಳಿಸಿದ ಕ್ರಮದಂತೆ ತೆಗೆದುಕೊಳ್ಳಬೇಕು. ಚಿಕಿತ್ಸೆ ಪ್ರಾರಂಭವಾದ ಬಳಿಕ ಕ್ರಿಮಿ ಇತರ ಮೂಳೆಗಳಿಗೆ ವ್ಯಾಪಿಸದು. ಈಗಾಗಲೇ ರೋಗ ಪತ್ತೆ ನಿಧಾನವಾಗಿ ರೋಗ ಪೀಡಿತ ಜಾಯಿಂಟ್ ಅಥವಾ ಕೀಲು ನಾಶವಾಗಿದ್ದರೆ ಅಂಗಗಳ ಚಲನೆ ಉದಾಹರಣೆಗೆ ಕೈ ಜಾಯಿಂಟ್‌ಗೆ ತಗಲಿದ್ದರೆ ಶಾಶ್ವತವಾಗಿ ಕೈ ಎತ್ತಲು ಸಾಧ್ಯವಾಗುವುದಿಲ್ಲ.

ಮೂಳೆ ಹಾನಿಗೊಳಗಾಗಿ ಕೀವಿನ ರೂಪದಲ್ಲಿ ಹರಿದು ಬರುವ ಸ್ರಾವದ ವಾಸನೆ, ಬಣ್ಣ, ಹುಣ್ಣಿನ ಗುಣಲಕ್ಷಣಗಳ ರೂಪದಿಂದ ನುರಿತ ತಜ್ಞರು ರೋಗವನ್ನು ಪತ್ತೆ ಮಾಡಬಲ್ಲರು. ಮೂಳೆ ಕ್ಷಯ ಬೆನ್ನುಮೂಳೆ, ಕೈ ಅಥವಾ ಕಾಲುಗಳ ಜಾಯಿಂಟ್‌ಗಳಲ್ಲಿ ಅಥವಾ ಪೃಷ್ಠಗಳ್ಲಲಿ ಕಾಣಿಸಿಕೊಳ್ಳಬಹುದು. ಇದಲ್ಲದೆ ಕ್ಷಯವು ಮೆದುಳು, ಕಿಡ್ನಿ, ಗರ್ಭಕೋಶ, ಹೊಟ್ಟೆ, ಕಣ್ಣು, ಹೀಗೆ ಕೆಲವು ಅಂಗ ಗಳಲ್ಲಿಯೂ ಅಪರೂಪವಾಗಿ ಕಾಣಿಸಿಕೊಳ್ಳುವುದಿದೆ. ಯಾವುದಿದ್ದರೂ ಈಗ ಚಿಕಿತ್ಸೆ ಲಭ್ಯವಿದ್ದು ರೋಗಿಗಳು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ.

### ರೋಗಕ್ಕೆ ಕಾರಣ

ಸಾಂಕ್ರಾಮಿಕ ರೋಗವಾದ ಕ್ಷಯಕ್ಕೆ ಮೈಕೋಬ್ಯಾಕ್ಟೀರಿಯಂ ಟ್ಯೂಬರ್‌ಕ್ಯುಲೋಸಿಸ್ ಎಂಬ ಕ್ರಿಮಿ ಕಾರಣವೆಂದು ಜನಜನಿತ. ಕ್ಷಯ ಬಾಧಿತ ವ್ಯಕ್ತಿಗಳು ಕೆಮ್ಮಿದಾಗ ಹೊರ ಬರುವ ಕ್ಷಯದ ಕ್ರಿಮಿಗಳು ಆರೋಗ್ಯವಂತನ ಶರೀರವನ್ನು ಪ್ರವೇಶಿಸುತ್ತವೆ. 'ಆದಿ ವ್ಯಾಧಿ' ಎಂದು ಹೇಳುವ ಟಿಬಿ ಶರೀರವನ್ನು ಕೃಶವಾಗಿಸುತ್ತದೆ. ಕಣ್ಣನ್ನು ನಿಸ್ತೇಜಗೊಳಿಸುತ್ತದೆ. ಮುಖಕಾಂತಿಯನ್ನು ಕ್ಷೀಣಿಸುತ್ತದೆ. ಕ್ಷಯ ನಿವಾರಣೆಗೆ ಇಂದು ಚಿಕಿತ್ಸೆ ಎಲ್ಲೆಡೆ ಲಭ್ಯ. ಹಾಗಿದ್ದರೂ ರೋಗ ನಿಯಂತ್ರಣ ಹೆಚ್ಚಾಗಬೇಕಾಗಿದೆ.

ಶ್ವಾಸಕೋಶದ ಕ್ಷಯರೋಗ ಸರಿಯಾಗಿ ಚಿಕಿತ್ಸೆ ಪಡೆಯದೆ ತನ್ನಷ್ಟಕ್ಕೆ ಗುಣವಾಗಿ ಸ್ವಲ್ಪ ರೋಗಾಣುಗಳು ಎಲುಬು ಮತ್ತು ಕೀಲುಗಳಲ್ಲಿ ಸೇರಿಕೊಂಡು ದೇಹದ ಪ್ರತಿರೋಧ ಶಕ್ತಿ ಕಡಿಮೆಯಾದಾಗ ಈ ರೋಗಾಣುಗಳು ಅಲ್ಲಿ ತಮ್ಮ ಸಂಖ್ಯೆಯನ್ನು ಜಾಸ್ತಿ ಮಾಡಿ ಅಸ್ಥಿ ಮತ್ತು ಕೀಲುಗಳಿಗೆ ಹರಡಿಕೊಳ್ಳುವುದೇ ದ್ವಿತೀಯ ಹಂತದ ಕ್ಷಯರೋಗವೆನಿಸುತ್ತದೆ. ಇದನ್ನೇ 'ಬೋನ್ ಅಂಡ್ ಜಾಯಿಂಟ್ ಟ್ಯೂಬರ್‌ಕ್ಯುಲೋಸಿಸ್ ಎನ್ನುತ್ತಾರೆ. ■



ಜಾಹೀರಾತು

# ಕಾಸ್ಮೆಟಿಕ್ ಸರ್ಜರಿ ಯಾರಿಗೆ



ಒಬ್ಬ ಒಳ್ಳೆಯ ಪರಿಣತಿ ಹೊಂದಿದ ಕಾಸ್ಮೆಟಿಕ್ ಸರ್ಜನ್‌ರಿಂದ ಕಾಸ್ಮೆಟಿಕ್ ಸರ್ಜರಿ ಮಾಡಿಸಿದಾಗ ತ್ವರಿತ ಮತ್ತು ಬಹಳ ಕಾಲದವರೆಗೂ ಉತ್ತಮ ಫಲಿತಾಂಶ ಸಿಗುವುದರ ಜೊತೆಗೆ ನಿಮ್ಮ ಸೌಂದರ್ಯವನ್ನು ಹಿಂದಿಗಿಂತ ಹೆಚ್ಚು ಸುಧಾರಣೆ ಮಾಡಬಹುದು. ಸರ್ಜರಿಯ ನಂತರ ನೀವು ಆತ್ಮವಿಶ್ವಾಸ, ಆತ್ಮಗೌರವ ಮತ್ತು ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸಿ ಉತ್ತಮ ಆರೋಗ್ಯದ ಲಾಭವನ್ನು ಮಾನಸಿಕವಾಗಿಯೂ, ದೈಹಿಕವಾಗಿಯೂ ಪಡೆಯಬಹುದು.

Hair Transplantation : ತಲೆಯ ಹಿಂಬದಿ ಭಾಗದ ಶಾಶ್ವತ ಕೂದಲನ್ನು ತಲೆಯ ಮುಂಭಾಗ ಹಾಗು ನೆತ್ತಿಯ ಭಾಗಕ್ಕೆ ಕಸಿ ಮಾಡಿಸಿ ನೈಸರ್ಗಿಕವಾದ ಕೂದಲನ್ನು ಶಾಶ್ವತವಾಗಿ ಮರಳಿ ಪಡೆಯಬಹುದು. ಕೂದಲ ಕಸಿಯನ್ನು ಹುಬ್ಬುಗಳನ್ನು, ಗಡ್ಡದ ಕೂದಲನ್ನು ಬೆಳೆಸಲು ಉಪಯೋಗಿಸಬಹುದು.

Liposuction : 3 ರಿಂದ 4 ಎಂ.ಎಂ ರಂಧ್ರಗಳ ಮೂಲಕ ಹೊಟ್ಟೆ, ಬೆನ್ನು, ತೊಡೆ, ತೋಳು, ಕುತ್ತಿಗೆ, ಮುಖ ಮತ್ತು ಎದೆಯ ಭಾಗದ ಕೊಬ್ಬನ್ನು ದ್ರವದ ರೂಪದಲ್ಲಿ ಶಾಶ್ವತವಾಗಿ ಹೊರತೆಗೆಯಲಾಗುವುದು.

Abdominoplasty ( Tummy Tuck ) : ಇದನ್ನು ಸಾಮಾನ್ಯವಾಗಿ ಹೆರಿಗೆಯ ನಂತರ ಮಹಿಳೆಯರಿಗೆ ಮಾಡಲಾಗುತ್ತದೆ. ಹೊಟ್ಟೆಯ ಭಾಗಕ್ಕೆ ಒಂದು ಸರಿಯಾದ ಆಕಾರವನ್ನು ಕೊಡಲಾಗುತ್ತದೆ.

Breast Augmentation / Reduction / Lift : ಸ್ತನದ ಗಾತ್ರವನ್ನು Implant ಮೂಲಕ ಹೆಚ್ಚಿಸಲಾಗುವುದು. ಹೀಗೆ ಮಾಡುವುದರಿಂದ ಎದೆ ಹಾಲುಣಿಸುವಿಕೆ ಅಥವಾ ಕ್ಯಾನ್ಸರ್ ತೊಂದರೆ ಎದುರಾಗುವುದಿಲ್ಲ. ದೊಡ್ಡ ಸ್ತನಗಳಿಂದ ಎದೆ ನೋವು, ಕುತ್ತಿಗೆ ನೋವು, ಬೆನ್ನು ನೋವು ಹಾಗು ಖಿನ್ನತೆಗೆ ಒಳಗಾಗುತ್ತಾರೆ. ಸ್ತನಗಳ ಗಾತ್ರವನ್ನು ದೇಹಕ್ಕೆ ಹೊಂದಾಣಿಕೆಯಾಗುವಂತೆ ಮಾಡಲಾಗುತ್ತದೆ.

Rhinoplasty ( Nose Reshaping ) : ಹುಟ್ಟಿನಿಂದಾದ / ಪೆಟ್ಟಿನಿಂದಾದ ಮೂಗಿನ ಆಕಾರದ ಬದಲಾವಣೆ ಹಾಗು ಉಸಿರಾಟದ ತೊಂದರೆಗಳನ್ನು ಸರಿಪಡಿಸಬಹುದಾಗಿದೆ.

Gynaecomastia : (ಪುರುಷರ ಎದೆಯ ಸರ್ಜರಿ) ಹುಡುಗರಿಂದ ವಯಸ್ಸಾದವರಿಗೂ ಕಾಡುವ ಒಂದು ಮುಜುಗರದ ಸಂಗತಿ, ಇಲ್ಲಿ ಎದೆಯ ಭಾಗ ಹೆಚ್ಚು ಉಬ್ಬಿನಂತಾಗಿರುತ್ತದೆ. ಗೈನಕೋಮಾಸ್ಟಿಯಾ ಸರ್ಜರಿಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

Fat Grafting : ಕೊಬ್ಬನ್ನು ಕಸಿ ಮಾಡುವುದರಿಂದ ವಯಸ್ಸಾದ ಮುಖದಲ್ಲಾಗುವ ಬದಲಾವಣೆಗಳನ್ನು ಮತ್ತು ಮೊಡವೆ ಕಲೆಗಳನ್ನು ಉತ್ತಮಗೊಳಿಸಲು ಸಹಕಾರಿಯಾಗಿರುತ್ತದೆ.

Post Bariatric Surgery : Abdominoplasty, Brachioplasty (ತೋಳುಗಳನ್ನು ಬಿಗಿಯಾಗಿಸುವಿಕೆ), ಥೈ ಲಿಫ್ಟ್, ಫೇಸ್ ಲಿಫ್ಟ್, ನೆಕ್ ಲಿಫ್ಟ್ ಬ್ರೋ ಲಿಫ್ಟ್, ಬ್ರೆಸ್ಟ್ ಲಿಫ್ಟ್ ಮುಂತಾದವುಗಳನ್ನು ದೇಹದ ಸೌಂದರ್ಯ ವರ್ಧನೆಗೆ ಉಪಯೋಗಿಸಲಾಗುವುದು.

Dimple Creation (ಕೆನ್ನೆಯ ಗುಳಿ), Scar Revision ಮಾಡಲಾಗುವುದು.

**ಡಾ : ಗಿರೀಶ್ ಎ. ಸಿ., M.B.B.S.,M.S., MCh, ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್, ಕರ್ಲ್ಸ್ ಮತ್ತು ಕರ್ವ್ಸ್ ಹೇರ್ ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ರಾಜಾಜಿನಗರ, ಬೆಂಗಳೂರು.**

8088400400 9448571216

www.curlsncurves.com

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು